ಕತೆ

# ಗೋಡೆಗಳು



**ರಾಜಕುಮಾರ ಕುಲಕರ್ಣಿ**

ಕಲೆ: ಆದಿತ್ಯ ಸದಾಶಿವ್



ಗೋಡೆಗಳಿಗೂ ಕಿವಿಗಳಿರುತ್ತವೆಂದು ರೂಢಿಗತವಾಗಿದ್ದ ಮಾತುಗಳನ್ನು ಕೇಳಿ ಬಲ್ಲ ಗಂಗಾಧರನಿಗೆ ಈಗ ಗೋಡೆಗಳಿಗೆ ಕಿವಿಗಳು ಮಾತ್ರವಲ್ಲ ಕಣ್ಣು ಮತ್ತು ಬಾಯಿ ಕೂಡ ಇದ್ದು ಅವು ಮನುಷ್ಯರಂತೆ ನೋಡುತ್ತವೆ, ಕೇಳುತ್ತವೆ ಮತ್ತು ಮಾತನಾಡುತ್ತವೆ ಎನ್ನುವ ನಿಚ್ಚಳ ಅರಿವಾದದ್ದೆ ಅವನು ತುಂಬ ಅಚ್ಚರಿಗೊಳಗಾಗಿದ್ದ. ಮೊನ್ನೆ ಲಾಡ್ಜಿನಲ್ಲಿ ಆಗಷ್ಟೆ ಖಾಲಿಯಾಗಿದ್ದ ಹನ್ನೊಂದನೇ ನಂಬರಿನ ರೂಮಿನಲ್ಲಿ ಅರೆಘಳಿಗೆ ಮಲಗಿ ತುಸು ವಿಶ್ರಾಂತಿ ತೆಗೆದುಕೊಳ್ಳಲೆಂದು ಹೋದವನಿಗೆ ಆ ಖಾಲಿ ರೂಮಿನಲ್ಲಿ ಕೇಳಿಬಂದ ಪಿಸುಧ್ವನಿಗೆ ಗಂಗಾಧರ ಬೆಚ್ಚಿಬಿದ್ದಿದ್ದ. ಪಿಸುಧ್ವನಿ ಕ್ರಮೇಣ ದೊಡ್ಡದಾಗುತ್ತ ಮಾತು ಸ್ಪಷ್ಟವಾಗಿ ಕೇಳಿಸತೊಡಗಿದಾಗ ಸುತ್ತಲೂ ಕಣ್ಣಾಡಿಸಿದವನಿಗೆ